# 2021
## ಪರದೆಯ ಹಿಂದೆ...

ಜನರನ್ನು ಚಿತ್ರಮಂದಿರಕ್ಕೆ ಸೆಳೆಯುವಲ್ಲಿ ಸ್ಟಾರ್ ನಟರ ಸಿನಿಮಾಗಳು ಬಹುಮುಖ್ಯ ಪಾತ್ರವಹಿಸುತ್ತವೆ. ಕನ್ನಡದ ಬಹುತೇಕ ಎಲ್ಲ ಸ್ಟಾರ್ ನಟರ ಸಿನಿಮಾಗಳೂ 2021ರಲ್ಲಿ ಬಿಡುಗಡೆಯಾಗಲು ಕಾದಿವೆ. 2020ರಲ್ಲಿಯೇ ಬಿಡುಗಡೆಯಾಗಬೇಕಾಗಿದ್ದ ಆ ಸಿನಿಮಾಗಳು ಈಗ ಡಬ್ಬಿಯಲ್ಲಿ ಕೂತು ಮುಕ್ತಿಗಾಗಿ ಹಂಬಲಿಸುತ್ತಿವೆ. ಚಿತ್ರಮಂದಿರ ಸಂಸ್ಕೃತಿಗೆ ಮತ್ತೆ ಜೀವಶಕ್ತಿ ತುಂಬಲು ಅವುಗಳ ಬೆಂಬಲವಂತೂ ಬೇಕೇ ಬೇಕು.

ಕನ್ನಡವಷ್ಟೇ ಅಲ್ಲ, ಬಾಲಿವುಡ್ ಅಂಗಳದಲ್ಲಿಯೂ ದೂಳೆಬ್ಬಿಸಿ, ಇಡಿ ಭಾರತೀಯ ಚಿತ್ರರಂಗವೇ ಕನ್ನಡದತ್ತ ಹೊರಳಿನೋಡುವಂತೆ ಮಾಡಿದ ಸಿನಿಮಾ ಪ್ರಶಾಂತ್ ನೀಲ್ ನಿರ್ದೇಶನದ, ಯಶ್ ನಟನೆಯ 'ಕೆಜಿಎಫ್'. ಈ ಚಿತ್ರದ ಎರಡನೇ ಭಾವ ಈ ವರ್ಷಾಂತ್ಯಕ್ಕೆ ಬಿಡುಗಡೆಯಾಗುವ ನಿರೀಕ್ಷೆಯಿತ್ತು. ಆದರೆ ಕೊರೊನಾ ಕಾರಣಕ್ಕೆ ಅದು ಸಾಧ್ಯವಾಗಲಿಲ್ಲ. ಆ ಸಿನಿಮಾ ಮುಂದಿನ ವರ್ಷ ಅಂದರೆ 2021ರಲ್ಲಿ ತೆರೆಕಾಣುವ ನಿರೀಕ್ಷೆ ಇದೆ.

ಪುನೀತ್ ರಾಜ್‌ಕುಮಾರ್ ಅಭಿನಯದ, ಸಂತೋಷ್ ಆನಂದರಾಮ್ ನಿರ್ದೇಶನದ 'ಯುವರತ್ನ' 2020ಯಲ್ಲಿಯೇ ಬಿಡುಗಡೆಯಾಗಬೇಕಾಗಿರುವ ಬಹುನಿರೀಕ್ಷಿತ ಸಿನಿಮಾಗಳಲ್ಲಿ ಒಂದು. ಕೊರೊನಾ ಕಾರಣಕ್ಕೆ ಒಂದು ಹಾಡಿನ ಚಿತ್ರೀಕರಣವನ್ನೂ ಉಳಿಸಿಕೊಂಡಿದ್ದ ಚಿತ್ರತಂಡ, ಲಾಕ್‌ಡೌನ್ ತೆರವಿನ ನಂತರ ಆ ಚಿತ್ರೀಕರಣವನ್ನು ಮುಗಿಸಿದೆ. ಈಗ ಚಿತ್ರ ಬಿಡುಗಡೆಗೆ ರೆಡಿಯಾಗಿದೆ. ಪುನೀತ್ ಈಗ ಚೇತನ್ ಕುಮಾರ್ ನಿರ್ದೇಶನದ 'ಜೇಮ್ಸ್' ಚಿತ್ರೀಕರಣದಲ್ಲಿ ತೊಡಗಿಕೊಂಡಿದ್ದಾರೆ. ಆ ಚಿತ್ರವೂ 2021ರಲ್ಲಿ ಬಿಡುಗಡೆಗೆ ಸಜ್ಜಾಗಬಹುದು. ಸುದೀಪ್ ಅಭಿನಯದ 'ಕೋಟಿಗೊಬ್ಬ 3', 2019ರಲ್ಲಿಯೇ ಸದ್ದು ಮಾಡಲು ಶುರುಮಾಡಿತ್ತು. ಇತ್ತೀಚೆಗೆ ಬಿಡುಗಡೆಯಾದ ಆ ಚಿತ್ರದ 'ಪಟಾಕಿ ಹುಡುಗಿಯೋ' ಹಾಡು ಸೋಷಿಯಲ್ ಮೀಡಿಯಾದಲ್ಲಿ ಎಬ್ಬಿಸಿರುವ ಹವಾ ನೋಡಿದರೆ ಆ ಸಿನಿಮಾದ ಕ್ರೇಜ್ ದೊಡ್ಡದಾಗಿಯೇ ಇದೆ ಎಂದು ಊಹಿಸಬಹುದು. ಸುದೀಪ್ ಈಗ ನಿರೂಪ್ ಭಂಡಾರಿ ನಿರ್ದೇಶನದ 'ಫ್ಯಾಂಟಮ್' ಚಿತ್ರದ ಚಿತ್ರೀಕರಣವನ್ನು ಬಹುತೇಕ ಮುಗಿಸಿದ್ದಾರೆ. ಈ ಕಾಂಬಿನೇಷನ್ ಈಗಾಗಲೂ ಅಭಿಮಾನಿಗಳಲ್ಲಿ ಕುತೂಹಲ ಮೂಡಿಸಿದೆ. 'ಕೋಟಿಗೊಬ್ಬ 3' ನಂತರ 'ಫ್ಯಾಂಟಮ್' 2021ರಲ್ಲಿಯೇ ಬಿಡುಗಡೆಯಾಗುವ ಸಾಧ್ಯತೆ ಇದೆ.

ದರ್ಶನ್ ಅವರ ಅಭಿಮಾನಿಗಳು ನಂದಕಿಶೋರ್ ನಿರ್ದೇಶನದ 'ರಾಬರ್ಟ್' ಚಿತ್ರದ ಬಿಡುಗಡೆಯನ್ನೇ ಎದುರುನೋಡುತ್ತಿದ್ದಾರೆ. ದುನಿಯಾ ವಿಜಯ್ ಕಥೆ ಬರೆದು ನಿರ್ದೇಶಿಸಿ ನಟಿಸಿರುವ, ಡಾಲಿ ಧನಂಜಯ್ ಕೂಡ ಇರುವ 'ಸಲಗ' ಕೂಡ ಬಿಡುಗಡೆಗೆ ಕಾಯುತ್ತಿದೆ. ಪಕ್ಕಾ ಮಾಸ್ ಶೈಲಿಯಲ್ಲಿರುವ ಈ ಸಿನಿಮಾವೂ ಚಿತ್ರಮಂದಿರದಲ್ಲಿ ಸದ್ದು ಮಾಡುವ ತಾಕತ್ತು ಹೊಂದಿದೆ. ಅವರೇ ಇನ್ನೊಂದು ಸಿನಿಮಾದ ನಿರ್ದೇಶನಕ್ಕೂ ಮುಂದಾಗಿದ್ದಾರೆ.

ಧ್ರುವ ಸರ್ಜಾ 'ಪೊಗರು' ಸಿನಿಮಾ ಮುಗಿಸಿ, 'ದುಬಾರಿ' ಸಿನಿಮಾದ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ. ಈ ಎರಡೂ ಸಿನಿಮಾಗಳು 2021ರಲ್ಲಿಯೇ ಬಿಡುಗಡೆಯಾಗಬಹುದು. ಮುರಳಿ ಅಭಿನಯದ 'ಮದಗಜ', ಶಿವರಾಜಕುಮಾರ್ ಅಭಿನಯದ 'ಭಜರಂಗಿ 2', 'ಬೈರತಿ ರಣಗಲ್ಲು' ಸಿನಿಮಾ ಕೂಡ 2021ರಲ್ಲಿ ಬಿಡುಗಡೆಯಾಗಬಹುದು. ಯೋಗರಾಜ್ ಭಟ್ ನಿರ್ದೇಶನದ 'ಗಾಳಿಪಟ 2' ಕೂಡ ಕೊನೆಯ ಹಂತದ ಚಿತ್ರೀಕರಣ ಮುಗಿಸಿ ಮುಂದಿನ ವರ್ಷವೇ ಚಿತ್ರಮಂದಿರಕ್ಕೆ ಬರಬಹುದು. ರಕ್ಷಿತ್ ಶೆಟ್ಟಿ ಮತ್ತು ಹೇಮಂತ್ ಕಾಂಬಿನೇಷನ್‌ನಲ್ಲಿ ರೂಪುಗೊಳ್ಳುತ್ತಿರುವ 'ಸಪ್ತಸಾಗರದಾಚೆ' ಸಿನಿಮಾ ಕೂಡ ಅದೇ ವರ್ಷ ಬಿಡುಗಡೆಯಾಗುವ ಸಾಧ್ಯತೆ ಇದೆ.

ಇನ್ನು ನೀನಾಸಂ ಸತೀಶ್, ಯುವರಾಜ್ ಕುಮಾರ್, ಧನಂಜಯ್ ಸೇರಿದಂತೆ ಹಲವರ ಸಿನಿಮಾಗಳೂ ಬಿಡುಗಡೆಗೆ ಕಾದಿವೆ. ಇವೆಲ್ಲವೂ ಗಾಂಧಿನಗರದ ಗಲ್ಲಿಗಳಲ್ಲಿ ಮತ್ತೆ ಶಿಳ್ಳೆ ಚಪ್ಪಾಳೆಗಳನ್ನು ಮೊಳಗಿಸಲಿವೆಯೇ ಅಥವಾ ಚಿತ್ರಮಂದಿರಗಳನ್ನು ನೆಚ್ಚಿಕೊಂಡಿದ್ದ ಸಿನಿಮಾಹಡಗು ಹಂತ ಹಂತವಾಗಿ ಮುಳುಗಲಿದೆಯೇ ಎಂಬುದಕ್ಕೆ 2021ನೇ ವರ್ಷವೇ ಉತ್ತರ ನೀಡುತ್ತದೆ.

ದರ್ಶನ್ ಅಭಿಮಾನಿಗಳು ಕಾತರದಿಂದ ಕಾಯುತ್ತಿರುವ 'ರಾಬರ್ಟ್' ಸಿನಿಮಾದಲ್ಲಿ ಪೋಸ್ಟರ್‌ಗಳ ಮೂಲಕವೇ ಸಾಕಷ್ಟು ಸದ್ದುಮಾಡುತ್ತಿದೆ.



ಸ್ಪಾಟ್‌ಲೈಟ್ 20-21

ಅವೆಲ್ಲವೂ ಹಳೆ ಸಿನಿಮಾಗಳೇ ಆಗಿದ್ದವು. ಅವುಗಳಿಗೂ ಜನರು ಬರತೊಡಗಿದ್ದು ಅಷ್ಟಕ್ಕಷ್ಟೆ.

ಇದೇ ಹಂತದಲ್ಲಿ (ಅಕ್ಟೋಬರ್ 29) ಕಾರ್ತಿಕ್ ಸರಗೂರು ನಿರ್ದೇಶನದ, ಪುಷ್ಕರ್ ಮಲ್ಲಿಕಾರ್ಜುನಯ್ಯ ಮತ್ತು ರಕ್ಷಿತ್ ಶೆಟ್ಟಿ ನಿರ್ಮಾಣದ 'ಭೀಮಸೇನ ನಳಮಹರಾಜ' ಸಿನಿಮಾ ಅಮೆಜಾನ್ ಪ್ರೈಮ್‌ನಲ್ಲಿ ಬಿಡುಗಡೆಯಾಗಿದ್ದು, ಈ ವರ್ಷದ ಗಮನಾರ್ಹ ಕನ್ನಡ ಸಿನಿಮಾಗಳ ಯಾದಿಯಲ್ಲಿ ಖಂಡಿತವಾಗಿಯೂ ಈ ಚಿತ್ರಕ್ಕೆ ಸ್ಥಾನವಿದೆ. ಚಿತ್ರಮಂದಿರಗಳ ಬಾಗಿಲು ತೆರೆದಿದ್ದರೂ ನಿರ್ಮಾಪಕರಿಗೆ ರಿಸ್ಕ್ ತೆಗೆದುಕೊಳ್ಳುವುದಕ್ಕಿಂತ ಅಮೆಜಾನ್ ತೆಕ್ಕೆಗೆ ಸಿನಿಮಾ ಒಪ್ಪಿಸಿ ಬಂದಷ್ಟು ಲಾಭವನ್ನು ಒಪ್ಪಿಸಿಕೊಂಡು ತೆಪ್ಪಗಿರುವುದು ಲೇಸು ಅನಿಸಿತ್ತು.

### ಚಿತ್ರಮಂದಿರ ಸಂಸ್ಕೃತಿ ಮರೆಯಾಯ್ತೆ?

ಬದಲಾದ ಸಂದರ್ಭದ ಹಿನ್ನೆಲೆಯಲ್ಲಿ ಹಲವರು, 'ಇನ್ನು ಚಿತ್ರಮಂದಿರಗಳ ಕಥೆ ಅಷ್ಟೆ, ಜನರು ಒಟಿಟಿ ವೇದಿಕೆಗಳಿಗೆ ಹೊಂದಿಕೊಂಡಾಗಿದೆ. ಇನ್ನೇನಿದ್ದರೂ ಅವುಗಳದ್ದೇ ಕಾಲ. ಚಿತ್ರಮಂದಿರಗಳ ಕಡೆಗಾಲ ಸಮೀಪಿಸಿದೆ' ಎಂದೆಲ್ಲ ವ್ಯಾಖ್ಯಾನಗಳನ್ನು ಧಾರಾಳವಾಗಿಯೇ ಬಿಡತೊಡಗಿದರು. ಉಳಿದವರು ಅದಕ್ಕೆ ತಲೆಯಾಡಿಸುವುದಕ್ಕೆ ಕಾರಣಗಳೂ ಇದ್ದವು. ಲಾಕ್‌ಡೌನ್ ಸಮಯದಲ್ಲಿ ಟಿಕ್‌ಟಾಕ್ ವಿಡಿಯೊಗಳ ಭರಾಟೆ, ಸೋಷಿಯಲ್ ಮೀಡಿಯಾಗಳನ್ನು ಬಳಸುವವರ ಪ್ರಮಾಣ, ಅದರ ಸಮಯದಲ್ಲಾದ ಹೆಚ್ಚಳವನ್ನು ನೋಡಿದರೆ